ಪಂಪು ಸೆಟ್ಟುಗಳಿಗೆ ವಿದ್ಯುತ್ ಪೂರೈಸುವ ಬಗ್ಗೆ.

1674 ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು):- ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗದಲ್ಲಿ 1988-89, 1989-90ನೇ ಸಾಲಿಗೆ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಬೇಡಿ ಬಂದ ಅರ್ಜಿಗಳೆಷ್ಟು, ಈ ಬೇಡಿಕೆಗಳಲ್ಲಿ ಎಷ್ಟು ಜನರಿಗೆ ವಿದ್ಯುತ್ ಪೂರೈಸಲಾಗಿದೆ, ಬಾಕಿ ಇರುವ ಅರ್ಜಿಗಳೆಷ್ಟು?

ಆ) ಬಾಕಿ ಇರುವ ಅರ್ಜಿಗಳಲ್ಲಿ ಒಂದು ವರ್ಷ ಅವಧಿಗೂ ಮೇಲ್ಪಟ್ಟು ಬಾಕಿ ಇರುವ ಅರ್ಜಿಗಳೆಷ್ಟು?

ಇ) ಹಾಗಾದರೆ ಅವುಗಳಿಗೆ ಯಾವಾಗ ವಿದ್ಯುತ್ ಪೂರೈಸುತ್ತೀರಿ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ ಸಚಿವರು.):-

ಅ) ಚಿತ್ರದುರ್ಗ ಜಿಲ್ಲೆಯಲ್ಲಿ 1988-89 ಮತ್ತು 1989-90ನೇ ಸಾಲುಗಳಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಗೆ ನೊಂದಾಯಿತವಾದ ಅರ್ಜಿಗಳ ಸಂಖ್ಯೆ ಆನುಕ್ರಮವಾಗಿ 4426 ಮತ್ತು 3195. ಈ ಪೈಕಿ ಒಟ್ಟು 4380 ಅರ್ಜಿದಾರರಿಗೆ ವಿದ್ಯುತ್ ಒದಗಿಸಲಾಗಿದ್ದು, 3241 ಅರ್ಜಿಗಳು ಬಾಕಿ ಉಳಿದಿವೆ.

ಆ) ಬಾಕಿ ಇರುವ ಅರ್ಜಿಗಳ ಪೈಕಿ ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಅರ್ಜಿಗಳ ಸಂಖ್ಯೆ : 662

ಇ) ಮಂಡಳಿಯನ್ನು ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ಸರ್ಕಾರವು ಅಂಗೀಕರಿಸಿರುವ'ರೋಸ್ಟರ್' ಪದ್ಧತಿಯನ್ನು ಅನುಸರಿಸುತ್ತಿದೆ. ಆಲ್ಲದೆ ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕೆ ಬೇಡಿಕೆ ಅಗಾಧವಾಗಿದ್ದು, ಮಂಡಳಿಯು ತನಗೆ ಲಭ್ಯವಿರುವ ಹಣಕ್ಕನುಗುಣವಾಗಿ ವಾರ್ಷಿಕ ಗುರಿಯನ್ನು ನಿಗದಿಪಡಿಸುತ್ತದೆ. ನೀರಾವರಿ ಪಂಪುಸೆಟ್ಟುಗಳ ವಿದ್ಯುದೀಕರಣಕ್ಕಾಗಿ ಕೋರಿ ಬರುವ ಅರ್ಜಿಗಳ ಸಂಖ್ಯೆಯು ನಿಗದಿತ ಗುರಿಗಿಂತ ಹೆಚ್ಚಿರುವುದರಿಂದ ನೊಂದಾಯಿತ ಎಲ್ಲಾ ಅರ್ಜಿದಾರರ ಬೇಡಿಕೆಯನ್ನು ಪೂರೈಸಲು ಕಷ್ಟ ಸಾಧ್ಯ.

ರೈತರುಗಳಿಗೆ ರೇಷ್ಮೆ ಬಿತ್ತನೆ ಮೊಟ್ಟೆಯ ವಿತರಣೆ ಬಗ್ಗೆ.

1675 ಶ್ರೀ ಎನ್.ಜಿ. ನಾಯ್ಕ (ಮೊಳಕಾಲ್ಮೂರು):- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೈತರಿಗೆ ರೇಷ್ಮೆ ಬಿತ್ತನೆ ಮೊಟ್ಟೆ ಚಿತ್ರದುರ್ಗ ಜಿಲ್ಲೆಯಲ್ಲಿ ಸಿಕ್ಕದೆ ತೊಂದರೆಯಾಗಿರವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಉತ್ತಮ ತಳಿ ಮೊಟ್ಟೆಗಳನ್ನು ರೈತರಿಗೆ ಕಾಲಕ್ಕೆ ಸರಿಯಾಗಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ವಿಫಾಟನ್ನು ಮಾಡಿದೆಯೇ;

ಇ) ಕಾಳಸಂತೆಯಲ್ಲಿ ರೇಷ್ಮೆ ಗೂಡುಗಳನ್ನು ಮಾರುವವರ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಎಸ್. ಆತ್ಮಾನಂದ (ರೇಷ್ಮೆ ಸಚಿವರು):-

ಅ) ಇಲ್ಲ.

ಆ) ಮಾಡಿದೆ.

ಇ) ಕಾಳಸಂತೆಯಲ್ಲಿ ರೇಷ್ಮೆ ಗೂಡು ಮಾರಾಟವಾಗುವುದನ್ನು ತಡೆಗಟ್ಟಲು ರೇಷ್ಮೆ ಕಾಯಿದೆ ಜಾರಿ ವಿಭಾಗವನ್ನು ಸರ್ಕಾರವು ಸ್ಥಾಪಿಸಿದೆ.